<u>ಕರ್ನಾಟಕ ವಿಧಾನ ಪರಿಷತ್ತು</u>

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 169 |
| ಸದಸ್ಯರ ಹೆಸರು | : | ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | **12.09.2022** |
| ಉತ್ತರಿಸುವವರು | : | **ಸನ್ಮಾನ್ಯ ಮುಖ್ಯಮಂತ್ರಿಗಳು** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರ ಅರಣ್ಯ ಇಲಾಖಾ ವತಿಯಿಂದ ಮಾನವ, ಆನೆ ದಾಳಿ ಸಂಘರ್ಷ ನಿಯಂತ್ರಣ ಕಾರ್ಯಕ್ರಮದ ಯೋಜನೆಯನ್ನು ಯಾವಾಗ ಜಾರಿಗೆ ತರಲಾಗಿತ್ತು. ಜಾರಿಗೆ ತಂದಿದ್ದಲ್ಲಿ, ಈ ಯೋಜನೆಯ ಉದ್ದೇಶದ ಬಗ್ಗೆ ಸಂಪೂರ್ಣ ವಿವರ ನೀಡುವುದು; | ಮಾನವ ಆನೆ ಸಂಘರ್ಷ ನಿಯಂತ್ರಣಕ್ಕಾಗಿ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>**ರೈಲ್ವೆ ಬ್ಯಾರಿಕೇಡ್ ನಿರ್ಮಾಣ:-** "ಮಾನವ-ಆನೆ ಸಂಘರ್ಷ" ಹೆಚ್ಚಾಗಿರುವ ಆಯ್ದ ಪ್ರದೇಶಗಳಲ್ಲಿ ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಕಾಮಗಾರಿಯನ್ನು 2014-15ನೇ ಸಾಲಿನಿಂದ ಕೈಗೊಳ್ಳಲಾಗುತ್ತಿದೆ. ಅಲ್ಲದೇ ಕಾಡಂಚಿನ ಗ್ರಾಮಗಳಿಗೆ ಉಪಯೋಗಿಸಿದ ರೈಲ್ವೆ ಹಳಿಗಳನ್ನು ಬಳಸಿಕೊಂಡು ರೈಲ್ವೆ ಬ್ಯಾರಿಕೇಡ್‌ಗಳನ್ನು ನಿರ್ಮಿಸಿ ಅಳವಡಿಸಿರುವುದರ ಮೂಲಕ ಕಾಡಾನೆ ಮತ್ತು ಮಾನವ-ಪ್ರಾಣಿಗಳ ಸಂಘರ್ಷ, ಬೆಳೆನಾಶ ಹಾಗೂ ವನ್ಯಪ್ರಾಣಿಗಳ ಪ್ರವೇಶ ತಡೆಗಟ್ಟುವ ಮತ್ತು ರೈತರಿಗೆ ದೀರ್ಘಕಾಲದವರೆಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ 2019-20ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 108 ರಲ್ಲಿ "ಉಪಯೋಗಿಸಿದ ರೈಲ್ವೆ ಹಳಿ ತಡೆಗೋಡೆಯಿಂದ ಮಾನವ-ಆನೆ ಸಂಘರ್ಷ ನಿಯಂತ್ರಣ" ಎಂಬ ಹೊಸ ಕಾರ್ಯಕ್ರಮ / ಯೋಜನೆಯನ್ನು ಅನುಷ್ಠಾನದ ಘೋಷಣೆಯಾಗಿರುತ್ತದೆ. 2019-20ನೇ ಸಾಲಿನಿಂದ ರೈಲ್ವೆ ಬ್ಯಾರಿಕೇಡ್ ನಿರ್ಮಾಣದ ಕಾಮಗಾರಿಯು ಕೈಗೊಂಡಿದ್ದು, ಇದು ದೀರ್ಘಾವಧಿ ಕಾಮಗಾರಿಯಾಗಿರುತ್ತದೆ.<br><br>**"ಆನೆ ಯೋಜನೆ"**:- ಕೇಂದ್ರ ಪುರಸ್ಕೃತ "ಆನೆ ಯೋಜನೆ" ಮಾನವ-ಆನೆ-ಸಂಘರ್ಷ ನಿಯಂತ್ರಣಕ್ಕಾಗಿ ಕಳ್ಳಬೇಟೆ ತಡೆ ಶಿಬಿರ ನಿರ್ವಹಣೆ/ ಆನೆ ಹಿಮ್ಮೆಟ್ಟಿಸುವ ತಂಡ ರಚನೆ /ಆನೆ ನಿರೋಧಕ ಕಂದಕ ಮತ್ತು ಸೋಲಾರ್ ತಂತಿಬೇಲಿ ನಿರ್ವಹಣೆ ಕಾಮಗಾರಿಗಳನ್ನು ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಂಡು, ಕೇಂದ್ರ ಸರ್ಕಾರದ ಅನುಮೋದನೆ ಪಡೆದು ನಿರ್ವಹಿಸಲಾಗುತ್ತಿದೆ.<br><br>**"ಮಾನವ-ವನ್ಯಪ್ರಾಣಿ ಸಂಘರ್ಷ ನಿಯಂತ್ರಣ"**:- ಮಾನವ ವನ್ಯಪ್ರಾಣಿ ಸಂಘರ್ಷ ನಿಯಂತ್ರಣಕ್ಕಾಗಿ ಕಳ್ಳಬೇಟೆ ತಡೆ ಶಿಬಿರ ನಿರ್ವಹಣೆ/ ಆನೆ ಹಿಮ್ಮೆಟ್ಟಿಸುವ ತಂಡ ರಚನೆ /ಆನೆ ನಿರೋಧಕ ಕಂದಕ ಮತ್ತು ಸೋಲಾರ್ ತಂತಿಬೇಲಿ ನಿರ್ವಹಣೆ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|

**ಆ)** ಉಪಯೋಗಿಸಿದ ರೈಲು ಹಳಿಗಳನ್ನು ಬಳಸಿಕೊಂಡು ಎಷ್ಟು ಕಿ.ಮೀ. ಉದ್ದದ ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಮಾಡಲು ಸರ್ಕಾರ ಗುರಿ ಹಾಕಿಕೊಳ್ಳಲಾಗಿತ್ತು ಮತ್ತು ಇದಕ್ಕಾಗಿ ಎಷ್ಟು ಹಣವನ್ನು ಸರ್ಕಾರ ಇಲ್ಲಿಯವರೆಗೆ ಈ ಯೋಜನೆಗೆ ಖರ್ಚು ಮಾಡಿದೆ; (ಮಾಹಿತಿ ನೀಡುವುದು)

ರಾಜ್ಯದಲ್ಲಿ ಮಾನವ ಆನೆ ಸಂಘರ್ಷ ನಿಯಂತ್ರಿಸಲು ಉಪಯೋಗಿತ ರೈಲ್ವೆ ಹಳಿಗಳನ್ನು ಉಪಯೋಗಿಸಿ 624.00 ಕಿ.ಮೀ. ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಮಾಡಲು ಉದ್ದೇಶಿಸಿದ್ದು, ಇದುವರೆಗೆ 217.438 ಕಿ.ಮೀ. ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಮಾಡಲಾಗಿದೆ.
ಸರ್ಕಾರವು ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಬಿಡುಗಡೆ ಮಾಡಿದ ಅನುದಾನದ ವಿವರ:-

(ರೂ.ಕೋಟಿಗಳಲ್ಲಿ)

| ವರ್ಷ | ಬಿಡುಗಡೆಗೊಳಿಸಿದ ಅನುದಾನ | ಖರ್ಚು ಮಾಡಿದ ವೆಚ್ಚ |
|---|---|---|
| 2019-20 | 50.00 | 50.00 |
| 2020-21 | 50.00 | 50.00 |
| 2021-22 | 50.00 | 50.00 |
| 2022-23 | 25.00 | 10.243 (ದಿನಾಂಕ 08.09.2022ರ ಅಂತ್ಯದವರೆಗೆ) |

**ಇ)** ಕಳೆದ 3 ವರ್ಷದಲ್ಲಿ ಆನೆಗಳ ದಾಳಿಯಿಂದ ಸಾವನಪ್ಪಿರುವ ರೈತರ ಸಂಖ್ಯೆ ಎಷ್ಟು; ಈ ಕುಟುಂಬದವರಿಗೆ ನೀಡಲಾದ ಪರಿಹಾರದ ಮೊತ್ತವೆಷ್ಟು; (ಮಾಹಿತಿ ಒದಗಿಸುವುದು)

ಕಳೆದ 3 ವರ್ಷದಲ್ಲಿ ಕಾಡಾನೆ ದಾಳಿಯಿಂದ ಉಂಟಾದ ಮಾನವ ಪ್ರಾಣ ಹಾನಿ ಪ್ರಕರಣಗಳ ವಿವರ ಕೆಳಕಂಡತಿದೆ.

| ಕ್ರ.ಸಂ | ವರ್ಷ | ಪ್ರಕರಣಗಳು | ಪಾವತಿಸಲಾದ ದಯಾತ್ಮಕ ಧನ (ರೂ.ಲಕ್ಷಗಳಲ್ಲಿ) |
|---|---|---|---|
| 1 | 2019-20 | 29 (*) | 145.00 |
| 2 | 2020-21 | 23 (**) | 150.00 |
| 3 | 2021-22 | 22 | 165.00 |
| | **ಒಟ್ಟು** | **74** | **460.00** |

(*):- ಪ್ರತಿ ಪ್ರಕರಣಕ್ಕೆ ರೂ.5.00 ಲಕ್ಷ
(**):- 23 ಪ್ರಕರಣಗಳಲ್ಲಿ ಪ್ರತಿ ಪ್ರಕರಣಕ್ಕೆ ರೂ.5.00 ಲಕ್ಷ ದಂತೆ 9 ಪ್ರಕರಣಗಳಿಗೆ ರೂ.45.00ಲಕ್ಷ ಹಾಗೂ 14 ಪ್ರಕರಣಗಳಿಗೆ ಪ್ರತಿ ಪ್ರಕರಣಕ್ಕೆ ರೂ.7.50 ಲಕ್ಷದಂತೆ ರೂ.105.00 ಲಕ್ಷ ಒಟ್ಟು **23** ಪ್ರಕರಣಗಳಿಗೆ ರೂ.150.00 ಲಕ್ಷಗಳು.
ವನ್ಯಪ್ರಾಣಿ ದಾಳಿಯಿಂದ ಉಂಟಾದ ಮಾನವ ಪ್ರಾಣ ಹಾನಿಯ ಪ್ರತಿ ಪ್ರಕರಣದಲ್ಲಿ ಮೃತರ ವಾರಸುದಾರರಿಗೆ ಸರ್ಕಾರಿ ಆದೇಶ ಸಂಖ್ಯೆ: FEE 130 FWL 2016, ದಿನಾಂಕ:19.09.2016 ರ ಪ್ರಕಾರ, ರೂ.5.00 ಲಕ್ಷ ಹಾಗೂ ಸರ್ಕಾರಿ ಆದೇಶ ಸಂಖ್ಯೆ FEE 66 FWL 2019 ದಿನಾಂಕ 07.01.2020ರ ಪ್ರಕಾರ ರೂ.7.50 ಲಕ್ಷ ಧಯಾತ್ಮಕ ಧನವನ್ನು ಪಾವತಿಸಲಾಗುತ್ತಿದೆ.
ಅಲ್ಲದೇ, ಸರ್ಕಾರಿ ಆದೇಶ ಸಂಖ್ಯೆ:FEE 61 FAP 2018 ದಿನಾಂಕ 16.10.2018ರ ಪ್ರಕಾರ ವನ್ಯಪ್ರಾಣಿಗಳ ದಾಳಿಯಿಂದ ಮಾನವ ಪ್ರಾಣಹಾನಿ ಪ್ರಕರಣಗಳಲ್ಲಿ ಮೃತರ ಕುಟುಂಬದ ವಾರಸುದಾರರಿಗೆ ಪ್ರತಿ ತಿಂಗಳಿಗೆ 2000.00 ಗಳಂತೆ 5 ವರ್ಷಗಳವರೆಗೆ ಮಾಸಾಶನವನ್ನು ನೀಡಲಾಗುತ್ತಿದೆ.

**ಈ)** ಕಾಡಂಚಿನ ಪ್ರದೇಶಗಳಲ್ಲಿ ಆನೆಗಳ ದಾಳಿ ಮತ್ತು ಹಾವಳಿ ಹೆಚ್ಚಾಗಿದ್ದು, ಕಳೆದ 3 ವರ್ಷದಲ್ಲಿ ಎಷ್ಟು ಆನೆ ನಿರೋಧಕ ಕಂದಕ ನಿರ್ಮಾಣ/ ಕೃಷಿ ಭೂಮಿಯಲ್ಲಿ ಸೌರಶಕ್ತಿ ಸೋಲಾರ್ ಬೇಲಿ ಅಳವಡಿಸಿಕೊಡುವುದು ಸೇರಿದಂತೆ ಯಾವ ಯಾವ ಕ್ರಮ ತೆಗೆದುಕೊಳ್ಳಲಾಗಿದೆ? (ವಿವರ ನೀಡುವುದು)

ಕಾಡಂಚಿನ ಪ್ರದೇಶಗಳಲ್ಲಿ ಆನೆಗಳ ದಾಳಿ ನಿಯಂತ್ರಿಸಲು ಕಳೆದ ಮೂರು ವರ್ಷಗಳಲ್ಲಿ ನಿರ್ಮಾಣ ಮಾಡಿರುವ ಬ್ಯಾರಿಕೇಡ್‌ಗಳ ವಿವರ ಈ ಕೆಳಕಂಡತಿದೆ.

| ಕ್ರ.ಸಂ. | ಕಾಮಗಾರಿ ವಿವರ | ನಿರ್ಮಾಣ (ಕಿ.ಮೀ.ಗಳಲ್ಲಿ) |
|---|---|---|
| 1 | ಆನೆ ನಿರೋಧಕ ಕಂದಕ | 550.86 |
| 2 | 50:50 ಆಧಾರಿತ ಸೋಲಾರ್ ತಂತಿಬೇಲಿ | 108.69 |
| 3 | ರೈಲ್ವೆ ಬ್ಯಾರಿಕೇಡ್ ನಿರ್ಮಾಣ | 134.938 |

**ಸಂಖ್ಯೆ: ಅಪಜೀ 120 ಎಫ್‌ಡಬ್ಲ್ಯೂಎಲ್ 2022**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿಗಳು